*ವಿವಿಧ ಹಣಕಾಸು ಸಂಸ್ಥೆಗಳಿಂದ ರಾಜ್ಯ ಸರ್ಕಾರ ಪಡೆದಿರುವ ಸಾಲ.*

2418 (3411) ಶ್ರೀ ರಾಮದಾಸ್ ಎ. (ಕೃಷ್ಣರಾಜಾ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಕಳೆದ 2 ವರ್ಷದಿಂದ ರಾಜ್ಯದಲ್ಲಿ ವಿವಿಧ ಹಣಕಾಸು ಸಂಸ್ಥೆಗಳು ಮತ್ತು ಅಂತರ ರಾಷ್ಟ್ರೀಯ ಸಂಸ್ಥೆಗಳಿಂದ ಪಡೆದಿರುವ ಸಾಲ ಎಷ್ಟು; ವರ್ಷವಾರು ವಿವರ ನೀಡುವುದು.

ಅ) ಈ ಹಣವನ್ನು ಯಾವ ಯಾವ ಇಲಾಖೆಗಳ ಯಾವ / ಯಾವ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದೆ ವಿವರ ನೀಡುವುದು;

ಇ) ವಿವಿಧ ಹಣಕಾಸು ಸಂಸ್ಥೆಗಳಿಂದ ಪಡೆದಿರುವ ಸಾಲದ ಶೇಕಡವಾರು ಬಡ್ಡಿ ಎಷ್ಟು; ಮರುಪಾವತಿ ವ್ಯವಸ್ಥೆ ಹೇಗೆ?

ಈ) ವಿವಿಧ ಇಲಾಖೆಗಳಲ್ಲಿ ಇಲಾಖೆಯ ಅಭಿವೃದ್ಧಿಗಾಗಿ ಸಾಲ ಪಡೆಯಲು ಅರ್ಜಿ ಸಲ್ಲಿಸಲಾಗಿದೆಯೇ; ಇದ್ದಲ್ಲಿ, ವಿವರ ನೀಡುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :—

ಅ) ರಾಜ್ಯ ಸರ್ಕಾರವು ಅಂತರ ರಾಷ್ಟ್ರೀಯ ಹಣಕಾಸು, ವಿಶ್ವಬ್ಯಾಂಕ್ ಅಥವಾ ವಿದೇಶಿ ಸಾಲಗಳನ್ನು ನೇರವಾಗಿ ಪಡೆಯುವುದಿಲ್ಲ. ವಿದೇಶಿ ಸಾಲ ಕೇಂದ್ರ ಸರ್ಕಾರದ ಮುಖಾಂತರ ಬರುತ್ತದೆ. ರಾಜ್ಯ ಸರ್ಕಾರವು ಕಳೆದ ಎರಡು ವರ್ಷಗಳಲ್ಲಿ ಪಡೆದಿರುವ ಸಾಲದ ವಿವರಗಳು ಈ ಕೆಳಕಂಡಂತೆ ಇರುತ್ತವೆ.

I) ವಿವಿಧ ಸಂಸ್ಥೆಗಳಿಂದ ಪಡೆದ ಸಾಲ

ರೂ. ಕೋಟಿಗಳಲ್ಲಿ

| | | ಲೆಕ್ಕ 1999-2000 | ಪರಿಷ್ಕೃತ ಅಂದಾಜು 2000-2001 |
|---|---|---|---|
| 1) | ಮಾರುಕಟ್ಟೆ ಸಾಲ | 903.88 | 825.58 |
| 2) | ಎಲ್.ಐ.ಸಿ | 243.26 | 105.43 |
| 3) | ಜಿ.ಐ.ಸಿ. | – | 36.10 |
| 4) | ನಬಾರ್ಡ್ | 141.17 | 203.00 |
| 5) | ಎನ್.ಸಿ.ಡಿ.ಸಿ | 6.69 | 13.65 |

II ಕೇಂದ್ರ ಸರ್ಕಾರದಿಂದ ಪಡೆದ ಸಾಲ:

| | | | |
|---|---|---|---|
| 1) | ಯೋಜನೇತರ ಸಾಲ | 953.18 | 1208.65 |
| 2) | ರಾಜ್ಯ ಯೋಜನೆ ಸಾಲ | 900.73 | 1039.60 |
| 3) | ಕೇಂದ್ರ ವಲಯ ಯೋಜನೆಗಳು | 0.17 | 0.55 |
| 4) | ಕೇಂದ್ರ ಪುರಸ್ಕೃತ ಯೋಜನೆ ಸಾಲ | 23.57 | 27.61 |
| | ಒಟ್ಟು | 3172.65 | 3460.17 |

ಬಹುರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಪಡೆದ ಸಾಲದ ವಿವರ ಈ ಕೆಳಕಂಡಂತೆ ಇರುತ್ತದೆ. ಇದರಲ್ಲಿ ಶೇ.70ರಷ್ಟು ಸಾಲ:

| | |
|---|---|
| 1999-2000 | 264.92 |
| 2000-2001 | 282.87 |
| ಒಟ್ಟು | 547.79 |

ಅ) ಮಾರುಕಟ್ಟೆ ಸಾಲ ಮತ್ತು ಕೇಂದ್ರ ಸರ್ಕಾರದಿಂದ ಬರುವ ಸಾಲಗಳನ್ನು ರಾಜ್ಯ ಯೋಜನೆ, ಕೇಂದ್ರ ವಲಯ ಯೋಜನೆ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಉಪಯೋಗಿಸಲಾಗುವುದು. ಬಹುರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಬರುವ ಹಣವನ್ನು ಈ ಕೆಳಕಂಡ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗಿದೆ.

| ಇಲಾಖೆ | ಕಾಮಗಾರಿ |
|---|---|
| ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ | ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯೀಕರಣಕ್ಕಾಗಿ (ವಿಶ್ವ ಬ್ಯಾಂಕ್) |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | ಕರ್ನಾಟಕ ಆರೋಗ್ಯ ವ್ಯವಸ್ಥೆಯ ಅಭಿವೃದ್ಧಿಗೆ (ವಿಶ್ವ ಬ್ಯಾಂಕ್) |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | ಅ. ರಾಯಚೂರು ಜಿಲ್ಲೆಯ ಆಸ್ಪತ್ರೆಗಳ ಅಭಿವೃದ್ಧಿಗೆ (ಪೆಟ್ರೋಲಿಯಂ ನಿರ್ಯಾತ ದೇಶಗಳ ಸಂಸ್ಥೆ) |
| ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ | ಮೇಲ್ಮೈ ಮತ್ತು ಅಂತರ್ಜಲ ಮಾಪನ ಮತ್ತು ಸುಧಾರಣಾ ಕಾರ್ಯಕ್ರಮಗಳಿಗಾಗಿ (ವಿಶ್ವ ಬ್ಯಾಂಕ್) |
| ಲೋಕೋಪಯೋಗಿ | ರಾಜ್ಯ ಹೆದ್ದಾರಿಗಳು- ಸುಧಾರಣೆಯ ತಾಂತ್ರಿಕ ಸಹಾಯಕ್ಕಾಗಿ (ವಿಶ್ವ ಬ್ಯಾಂಕ್) |
| ಕರ್ನಾಟಕ ನಗರ ಮೂಲಭೂತ ಅಭಿವೃದ್ಧಿ ನಿಗಮ ನಿಯಮಿತ | ರಾಜ್ಯದ ನಾಲ್ಕು ನಗರ : ಪಟ್ಟಣಗಳ ನಗರಾಭಿವೃದ್ಧಿಗಾಗಿ (ಏಷ್ಯನ್ ಅಭಿವೃದ್ಧಿ ಬ್ಯಾಂಕ್) |

ವಿವಿಧ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲ ಪಡೆದಿರುವ ಸಾಲಕ್ಕೆ ಬಡ್ಡಿ ದರ ಈ ಕೆಳಕಂಡಂತೆ ಇರುತ್ತದೆ.

| | |
|---|---|
| ಮಾರುಕಟ್ಟೆ ಸಾಲ | ಶೇ.10.35 |
| ಎಲ್.ಐ.ಸಿ | ಶೇ. 12 |
| ಜಿ.ಐ.ಸಿ. | ಶೇ. 12 |
| ನಬಾರ್ಡ್ | ಶೇ. 11 |
| ಎನ್.ಸಿ.ಡಿ.ಸಿ | ಶೇ.12.75 |
| ವಿದೇಶಿ ಸಾಲದ ಬಡ್ಡಿ ದರ | ಶೇ. 12 |
| ಸಣ್ಣ ಉಳಿತಾಯ | ಶೇ.11.50 |
| ಕೇಂದ್ರ ಸರ್ಕಾರದ ಸಾಲ | ಶೇ.11.50 |

ಸಾಲ ಮರುಪಾವತಿಗಳನ್ನು ಆಯಾ ಸಾಲದ ಷರತ್ತು ಮತ್ತು ನಿಬಂದನೆಗಳಂತೆ ಆಯವ್ಯಯದಲ್ಲಿ ಅವಕಾಶ ಮಾಡುವುದರ ಮೂಲಕ ಮರು ಪಾವತಿ ಮಾಡಲಾಗುವುದು.

ವಿವಿಧ ಇಲಾಖೆಗಳಲ್ಲಿ ಇಲಾಖೆಯ ಅಭಿವೃದ್ಧಿಗಾಗಿ ಅಭಿವೃದ್ಧಿ ಸಾಲ ಪಡೆಯಲು ಇಲಾಖೆಗಳಿಂದ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ.

*ದಾವಣಗೆರೆ ನಗರಕ್ಕೆ ಕುಡಿಯುವ ನೀರಿನ ಯೋಜನೆ.*

2420(2894) ಶ್ರೀ ಎನ್.ಎ. ರವೀಂದ್ರನಾಥ್ (ಮಾಯಕೊಂಡ) :— ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ದಾವಣಗೆರೆ ನಗರಕ್ಕೆ ಕುಡಿಯುವ ನೀರು ಪೂರೈಕೆಗೆ ಮಂಜೂರು ಆಗುರುವ ಯೋಜನೆಗಳು ಯಾವುವು? ಇವುಗಳ ಅಂದಾಜು ವೆಚ್ಚ ಎಷ್ಟು? ಇದುವರೆಗೂ ವಿಚ್ಚು ಮಾಡಿರುವ ಹಣ ಎಷ್ಟು?

2. ಸದರಿ ಯೋಜನೆಗಳು ನಿಧಾನ ಗತಿಯಲ್ಲಿ ನಡೆಯುತ್ತಿರುವುದಕ್ಕೆ ಕಾರಣಗಳೇನು? ಮತ್ತು ಕಳಪೆ ಕಾಮಗಾರಿ ಆಗುತ್ತಿರುವುದು ಗಮನಕ್ಕೆ ಬಂದಿದೆಯೇ?

3. ಕಾಮಗಾರಿಗಳೆಲ್ಲವೂ ಕಾಲಮಿತಿ ಯೋಜನೆಗಳೇ? ಇದ್ದಲ್ಲಿ ಕಾಲಮಿತಿ ಏನು?

4. ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?